1ನೇ ಹೆಚ್ಚುವರಿ  ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ , ನ್ಯಾಯಾಧೀಶರವರ ನ್ಯಾಯಾಲಯ , ಚನ್ನಗಿರಿ .

ಸಿಸಿ ನಂ**. 2039/2025**

ಸಾಕ್ಷಿಗೆ ದಿನಾಂಕಃ  31-10-2025 ರಂದು ಪ್ರಮಾಣ ವಚನ ಭೋಧಿಸಲಾಯಿತು .

**ಮುಂದುವರೆದ ಪಾಟೀ ಸವಾಲು -ಆರೋಪಿತರ  ಪರ ವಕೀಲರಾದ ಟಿ ಎಲ್ ಎಸ್ ಎ ವಕೀಲರಿಂದಃ**

ಆರೋಪಿ ನನ್ನ ಬಳಿಯಿಂದ ಕಿತ್ತುಕೊಂಡು ಹೋದ ಮೊಬೈಲನ್ನು ರಸ್ತೆಯಿಂದ 30 ರಿಂದ 40 ಅಡಿ ದೂರದಲ್ಲಿ ಬಿಸಾಡಿರುತ್ತಾರೆ.  ಆರೋಪಿತರು ನನ್ನ ಬಳಿಯಿಂದ ಕಿತ್ತ ಚೈನನ್ನು ನಾನು ಪೊಲೀಸರ ವಶಕ್ಕೆ ಕೊಟ್ಟಿಲ್ಲ ಎಂದರೆ ಸರಿ. ಸದರಿ ಮೊಬೈಲ್ ಮಂಗಜ್ಜರ ತೋಟದ ಅಜ್ಜಯ್ಯನವರ ತೋಟದಲ್ಲಿ ಬಿದ್ದಿತ್ತು.  ಸದರಿ ಸಂದರ್ಭಕ್ಕೆ ಸಮಯ 8-30 ರಿಂದ 9 ಗಂಟೆಯಾಗಿತ್ತು. ನಾನು ಮೊಬೈಲ್ ಸಿಕ್ಕ ವಿಚಾರವನ್ನು ಮಾರನೇ ದಿನ ಪೊಲೀಸರಿಗೆ ತಿಳಿಸಿರುತ್ತೇನೆ. ನಾನು ಮೊಬೈಲ್ ಕಳೆದುಕೊಂಡ ರಾತ್ರಿಯೇ ನನಗೆ ಮೊಬೈಲ್ ಸಿಕ್ಕಿಲ್ಲ ಎಂದರೆ ಸರಿ.  ಆರೋಪಿತರಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧಇಲ್ಲದೇ ಇದ್ದರೂ ಸಹ ನಾನು ಸುಳ್ಳು ದೂರನ್ನು ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿ.

**(ಆರೋಪಿರು ದಾವಣೆಗೆ ಜಿಲ್ಲಾ ಕಾರಾಗೃಹದ ವಾಟ್ಸಪ್ ವೀಡಿಯೋ ಕಾನ್ಫರೆನ್ ಮುಖೇನ ಹಾಜರಿರುತ್ತಾರೆ. )**

**ಮರು ವಿಚಾರಣೆ  ಇಲ್ಲ.**

**( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪರಿಸಲಾಯಿತು.)**                    **ಓ.ಹೇ.ಕೇ. ಸರಿ ಇದೆ.**

**Sd/-**

**01ನೇ  ಹೆಚ್ಚುವರಿ  ಸಿವಿಲ್ ನ್ಯಾಯಾಧೀಶರು**

**ಮತ್ತು ಜೆಎಂಎಫ್ ಸಿ,ಚನ್ನಗಿರಿ.**